ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು

ಸಿ.ಸಿ. 962/2017

ಪಿರ್ಯಾದುದಾರರು:- ಸರ್ಕಾರದ ಪರವಾಗಿ: ಕಡೂರು ಪೋಲೀಸರಿಂದ

ವಿರುದ್ಧ

ಆರೋಪಿತರು:- ಪ್ರಕಾಶ್ ನಾಯ್ಕ ಮತ್ತು ಇನ್ನೊಬ್ಬರು

ದೋಷಾರೋಪಣೆ

ಶ್ರೀ ಸಿ.ಎನ್.ಚಂದನ್, ಬಿ.ಎಸ್‌ಸಿ.ಎಲ್.ಎಲ್.ಬಿ., ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವ:

1. ಪ್ರಕಾಶ್ ನಾಯ್ಕ, ಬಿನ್ ಮೂರ್ತಿ ನಾಯ್ಕ, 28 ವರ್ಷ,
2. ಅವಿನಾಶ್, ಬಿನ್ ಮೂರ್ತಿ ನಾಯ್ಕ, 25 ವರ್ಷ,

ಇಬ್ಬರೂ ಚಿಕ್ಕಿಂಗೆಳ ಗ್ರಾಮ, ಕಡೂರು ತಾಲ್ಲೂಕು ವಾಸಿಗಳು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆ:

ದಿನಾಂಕ: 02.01.2017ಕ್ಕೂ ಮುಂಚೆ ಕಡೂರು ಪೋಲೀಸ್ ಠಾಣಾ ವ್ಯಾಪ್ತಿಯ ಚಿಕ್ಕಿಂಗೆಳ ಗ್ರಾಮದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1ರವರು ನೇತ್ರಾವತಿರವರು ಗ್ರಾಮದಲ್ಲಿ ರಸ್ತೆಯಲ್ಲಿ ಓಡಾಡುವಾಗ ಯಾರೂ ಇಲ್ಲದ ಸಮಯದಲ್ಲಿ ಅವರನ್ನು ಕೆಟ್ಟದಾಗಿ ನೋಡುವುದು, ಛುಡಾಯಿಸುವುದು, ರೇಗಿಸುವುದು ಹಾಗೂ ಅವರನ್ನು ಏಕಾಏಕಿ ಹಿಡಿದುಕೊಂಡು ಬಲವಂತವಾಗಿ ಎಳೆದಾಡಿ ಅವರೊಂದಿಗೆ ಅಸಭ್ಯವಾಗಿ ವರ್ತಿಸಿರುತ್ತೀರಿ ಎಂದು ತನಿಖೆಯಿಂದ ದೃಡಪಟ್ಟಿದ್ದು ನೀವು ಭಾರತೀಯ ದಂಡ ಸಂಹಿತೆಯ ಕಲಂ 354-ಎ, ಬಿ ಮತ್ತು ಸಿ ಸಹಕಲಂ 34 ರೀತ್ಯಾ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ, ದಿನಾಂಕ: 02.01.2017 ರಂದು ಬೆಳಿಗ್ಗೆ ಸುಮಾರು 7.30 ಗಂಟೆಗೆ ಚಾಸಾ-1, ಚಾಸಾ-4 ಸುಶೀಲಾಬಾಯಿ ಮತ್ತು ಚಾಸಾ-5 ಸಿಂಚನರವರು ವಾಸವಿರುವ ಮನೆಗೆ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಏಕಾಏಕಿ ಅಕ್ರಮ ಪ್ರವೇಶ ಮಾಡಿರುತ್ತೀರಿ ಎಂದು ತನಿಖೆಯಿಂದ ದೃಡಪಟ್ಟಿದ್ದು ನೀವು ಭಾರತೀಯ ದಂಡ ಸಂಹಿತೆಯ ಕಲಂ 448 ಸಹಕಲಂ 34 ರೀತ್ಯಾ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1ರವರ ಮನೆಗೆ ಅಕ್ರಮ ಪ್ರವೇಶ ಮಾಡಿ, ಚಾಸಾ-1ರವರಿಗೆ ಸೂಳೆ ಮುಂಡೆ, ಬೇವರ್ಸಿಮುಂಡೆ ನಮ್ಮ ಮೇಲೆ ಪೋಲೀಸರಿಗೆ ದೂರು ಕೊಡುತ್ತೀಯ ಹಾಗೂ ಚಾಸಾ-4 ಸುಶೀಲಾಬಾಯಿರವರು ಬಿಡಿಸಲು ಬಂದಾಗ ಅವರಿಗೂ ಸಹ ಸೂಳೆಮುಂಡೆ, ಬೇವರ್ಸಿಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು ನೀವು ಭಾರತೀಯ ದಂಡ ಸಂಹಿತೆಯ ಕಲಂ 504 ಸಹಕಲಂ 34 ರೀತ್ಯಾ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1ರವರ ಮನೆಗೆ ಅಕ್ರಮ ಪ್ರವೇಶ ಮಾಡಿ, ಚಾಸಾ-1 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-1ರವರನ್ನು ಹಿಡಿದು ಎಳೆದಾಡಿ ಹೊಡೆದು, ಅದನ್ನು ಬಿಡಿಸಲು ಬಂದ ಚಾಸಾ-5ರವರಿಗೂ ಕೈಗಳಿಂದ ಹೊಡೆದು ಅವರನ್ನು ಮನೆಯ ಮುಂದಿನ ರಸ್ತೆಗೆ ಎಳೆದುಕೊಂಡು ಬಂದು ತಲೆಕೂದಲನ್ನು ಹಿಡಿದು ಎಳೆದಾಡಿ ಚಾಸಾ-4ರವರಿಗೂ ಸಹ ಕೈಗಳಿಂದ ಹೊಡೆದು ಕೆಳಗೆ ಬೀಳಿಸಿ ಕಾಲುಗಳಿಂದ ಹೊಡೆದು ನೋವುಂಟು ಮಾಡಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು ನೀವು ಭಾರತೀಯ ದಂಡ ಸಂಹಿತೆಯ ಕಲಂ 323 ಸಹಕಲಂ 34 ರೀತ್ಯಾ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಐದನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1ರವರ ಮನೆಗೆ ಅಕ್ರಮ ಪ್ರವೇಶ ಮಾಡಿ, ಚಾಸಾ-1 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-1, 4 ಮತ್ತು 5ರವರಿಗೆ ಕೈಗಳಿಂದ ಮತ್ತು ಕಾಲಿನಿಂದ ಹಲ್ಲೆ ಮಾಡಿ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ, ಮನೆಯ ಒಳಗೆ ಕೂಡಿ ಹಾಕಿ ಸೀಮೆಎಣ್ಣೆ ಸುರಿದು ಸಾಯಿಸುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು ನೀವು ಭಾರತೀಯ ದಂಡ ಸಂಹಿತೆಯ ಕಲಂ 506 ಸಹಕಲಂ 34 ರೀತ್ಯಾ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ

17.2.18

(ಸಿ.ಎನ್.ಚಂದನ್)
ಸಿ/ಸಿ ಪ್ರ: ಪ್ರ:ದ:ನ್ಯಾ:ದಂ: ಕಡೂರು.

ಪ್ರಧಾನ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು

ಸಿ.ಸಿ.962/2017

ಆರೋಪಿ ಸಂಖ್ಯೆ:1

ಅಪಾದಿತರ ಹೆಸರು: ಪ್ರಕಾಶ ನಾಯ್ಕ

ತಂದೆಯ ಹೆಸರು: ಮೂರ್ತಿ ನಾಯ್ಕ

ವಯಸ್ಸು : 28 ವರ್ಷ

ಉದ್ಯೋಗ :

ವಾಸಸ್ಥಳ : ಚಿಕ್ಕಿಂಗಳ ಗ್ರಾಮ, ಕಡೂರು ತಾಲ್ಲೂಕು

ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ಅಡಿ ಪ್ರಕಾರ ಆರೋಪಿಯ ಹೇಳಿಕೆ:

ಪ್ರ: 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉ: Yes

ಪ್ರ: 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉ: pleaded guilty

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

17.2.18

Prakasha. M

ಸಿ/ಸಿ ಪ್ರ: ಪ್ರ:ದ:ನ್ಯಾ:ಹ: ಕಡೂರು.

ಪ್ರಧಾನ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು

ಸಿ.ಸಿ.962/2017

ಆರೋಪಿ ಸಂಖ್ಯೆ: 2
ಅಪಾದಿತರ ಹೆಸರು: ಅವಿನಾಶ್
ತಂದೆಯ ಹೆಸರು: ಮೂರ್ತಿನಾಯ್ಕ
ವಯಸ್ಸು : 22 ವರ್ಷ
ಉದ್ಯೋಗ :
ವಾಸಸ್ಥಳ : ಬಿಕ್ಕಿಂಗಳ ಗ್ರಾಮ, ಕಡೂರು ತಾಲ್ಲೂಕು

ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ಅಡಿ ಪ್ರಕಾರ ಆರೋಪಿಯ ಹೇಳಿಕೆ:

ಪ್ರ: 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉ: Yes

ಪ್ರ: 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉ: Pleaded guilty

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

12.2.18

ಸಿ/ಸಿ ಪ್ರ: ಪ್ರ:ದ:ನ್ಯಾ:ದಂ: ಕಡೂರು.